ಇವನ ಹಿಂದೆ ಎರಡೇ ವರ್ಷಕ್ಕೆ ಮಗಳಿದ್ದಾಳೆ. ಅವಳ ಶಿಕ್ಷಣ, ಅಂತಸ್ತಿಗೆ ತಕ್ಕಂತೆ ಅವಳ ಮದುವೆ... ಎಲ್ಲದಕ್ಕೂ ದುಡ್ಡು ಬೇಡವೆ?" ಎಂದು ಹೇಳುತ್ತಿದ್ದಂತೆ ದಾಕ್ಷಾಯಿಣಿ ಒಳಬಂದಳು. ಇರಿಸು ಮುರಿಸಾಗುತ್ತಿತ್ತವಳಿಗೆ. ಹೌದು, ನಿರೀಕ್ಷಿಸಿದ್ದೇ ಬೇರೆ. ಇಲ್ಲಿ ನಡೆಯುತ್ತಿರುವುದೇ ಬೇರೆ.

ಶಂಭು ಶುರು ಮಾಡಿಕೊಂಡಿದ್ದ. "ಲಂಡನ್ನಿಗೆ ಕಂಪೆನಿಯಿಂದ ಕಳಿಸಿದಾಗ ಎಷ್ಟು ಖುಷಿಯಾಗಿತ್ತು ಗೊತ್ತಾ? ಕೆಲವೇ ವರ್ಷಗಳಲ್ಲಿ ಚೆನ್ನಾಗಿ ದುಡ್ಡು ಮಾಡಿಕೊಂಡು ಬರಬೇಕೂಂತ್ಲೇ ಹೋದದ್ದು. ಆದ್ರೆ ಅಲ್ಲಿ ಪಾಡು ಬೇಡ. ಇಲ್ಲಿ ಆರಾಮಾಗಿ ದೊಡ್ಡ ಮನೇಲಿದ್ದವರು ಬಾಡಿಗೆ ಹಂಚಿ ಹೋಗಲೀಂತ ಎರಡು ಫ್ಯಾಮಿಲಿಗಳು ಒಟ್ಟಿಗೆ ಇದ್ವಿ. ಕೆಲಸದವಳಿಲ್ಲ. ಎಲ್ಲ ನಾವೇ ಮಾಡಿಕೊಳ್ಳಬೇಕು. ಒಬ್ಬೊಬ್ಬರ ಆಚಾರ ವಿಚಾರಗಳು ಒಂದೊಂದು ರೀತಿ. ಅಡಿಗೆ ಊಟ ಯಾವುದೂ ಹೊಂದದೇ ಕಷ್ಟವಾಯಿತು. ಟ್ಯೂಬ್ ಟ್ರೇನ್, ಮೆಟ್ರೋ ಎಲ್ಲ ಇದ್ದರೂ ಸ್ಟೇಷನ್‌ವರೆಗೆ ನಡೆದೂ ನಡೆದೂ ಸಾಕಾಗುತ್ತಿತ್ತು. ನಿಜವಾಗಿ ನಮ್ಮ ಊರು, ನಮ್ಮ ನೆಲವೇ ಹಿತವಾಗಿ ನೆಲದ ಅಂಚೇ ಸಾಕೆನ್ನುವ ಮಟ್ಟಕ್ಕೆ ಬಂದುಬಿಟ್ಟಿದ್ದೆವು. ಆದರೆ ಹೊರಗೆ ಹೇಳುವ ಹಾಗಿರಲಿಲ್ಲ. ತೋರಿಕೆಗೆ ಮುಖವಾಡ ಹಾಕ್ಕೊಂಡು ನೆಂಟರಿಷ್ಟರಿಗೆಲ್ಲ ಉಡುಗೊರೆ ಹಿಡಿದುಕೊಂಡು ಬಂದು ನಿಟ್ಟುಸಿರು ಬಿಟ್ಟಿದ್ದೆ. ಕೊಳ್ಳುವ, ತಿನ್ನುವ ಪ್ರತಿಯೊಂದನ್ನೂ ಪೌಂಡ್‌ನಿಂದ ರೂಪಾಯಿಗೆ ಲೆಕ್ಕ ಹಾಕುತ್ತ 'ಅಯ್ಯೋ, ಇಷ್ಟಾ? ಬೇಡ್ವೇ ಬೇಡವೆನ್ನುತ್ತಾ ಎಷ್ಟು ಹೊತ್ತಾದರೂ ಮನೆಗೆ ಬಂದು ತಿನ್ನುತ್ತಾ ಕಾಲ ಕಳೆದದ್ದಾಗಿತ್ತು" ಎನ್ನುತ್ತ ಹೇಳಿದವನ ಕತೆ ಕೇಳಿ ಎಲ್ಲರೂ ಮೆಲ್ಲನೆ ನಕ್ಕರು.

**ಪೌರಾಣಿಕ ದಾಕ್ಷಾಯಿಣಿ ಶಿವನನ್ನು ಹಟದಿಂದ ಒಪ್ಪಿಸಿ ಹೊರಟಳಂತೆ. ಇನ್ನು ಕಲಿಯುಗದ ದಾಕ್ಷಾಯಿಣಿ, "ಏನೇ ಆಗಲಿ, ನೀಲೇಶನ ಮಗನ ಬರ್ತಡೇಗೆ ನಾವು ನಮ್ಮ ಹೊಸ ಕಾರಲ್ಲೇ ಹೋಗೋದು" ಎಂದು ಫರ್ಮಾನು ಹೊರಡಿಸಿದಳು.**

"ದಾಕ್ಷಾ, ಎಲ್ಲರಿಗೂ ಕಾಫೀನೇ ಮಾಡಿಬಿಡು" ಎಂದು ಕೂಗಿದ ಶಿವಾನಂದ. ಸಿಡಿಮಿಡಿಗೊಳ್ಳುತ್ತಲೇ ಫಿಲ್ಟರ್ ತೆರೆದು ನೋಡಿದಳು. ತೊಟ್ಟೂ ಡಿಕಾಕ್ಷನ್ ಇಲ್ಲ. "ಛೇ!" ಎಂದವಳು ನೀರು ಕುದಿಯಲಿಟ್ಟು ಡಿಕಾಕ್ಷನ್ ಹಾಕಿ ಇಳಿಯುವವರೆಗೆ ತಲೆಗೆ ಕೈ ಹೊತ್ತು ಕುಳಿತಳು.

ಇದೆಲ್ಲ ಶುರುವಾದದ್ದೇ ಅರುಣಾಳ ಮದುವೆಯಿಂದ. ಆ ದಿನ ದಾಕ್ಷಾಯಿಣಿ ಕೊರಳಲ್ಲಿ ಚಿನ್ನದ ನೆಕ್ಲೇಸ್, ವಾಲೆ ಜುಮುಕಿ ತೊಟ್ಟು ಕಂಚಿ ಸೀರೆಯುಟ್ಟು ಎಲ್ಲರೊಂದಿಗೆ ಮಾತಾಡಿದ್ದೇ ಮಾತಾಡಿದ್ದು. ಊಟವಾದ ತಕ್ಷಣ ಎಲ್ಲರೂ ಪೇರಿ ಕಿತ್ತರು. ಒಂದೊಂದೇ ಕಾರುಗಳು 'ಟಾ ಟಾ', 'ಬೈ' ಹೇಳುತ್ತ 'ಸುಂಯ್'ಎಂದು ದೂಳೆಬ್ಬಿಸಿದವು. ಎರಡೂ ಮಕ್ಕಳನ್ನು ಸ್ಕೂಟಿಯ ಮೇಲೆ ಕೂರಿಸಿಕೊಂಡು ಬ್ಯಾಗಿಟ್ಟುಕೊಂಡ ಶಿವಾನಂದ "ನೀ ಬಸ್ಸಿಗೆ ಬಂದ್ಬಿಡು ದಾಕ್ಷಾಯಿಣಿ" ಎಂದವನೇ ಹೊರಟು ಹೋದ. ಕಳಿಸಲು ನಿಂತಿದ್ದ ನೆಂಟರಿಷ್ಟರ ಮಧ್ಯೆ ಒಂಥರಾ ಅಪಮಾನವಾದಂತಾಯಿತು ಅವಳಿಗೆ. ಅಲ್ಲೇ ಇದ್ದ ಸೋದರತ್ತೆ "ನೀನೊಂದು ಕಾರು ತೊಗೊಬಾರ್ದೇನೆ ದಾಕ್ಷಾ" ಎನ್ನಬೇಕೆ? ಕಂಗಳು ತುಂಬಿ ಬಂದಂತಾಯಿತು. ತಂಗಿ,